KSMC

# ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್

(ಕರ್ನಾಟಕ ರಾಜ್ಯ ಸರ್ಕಾರದ ಒಂದು ಸಾರ್ವಜನಿಕ ಉದ್ದಿಮೆ)

# KARNATAKA STATE MINERALS CORPORATION LIMITED

(A Government of Karnataka Undertaking)

Regd. Office: TTMC 'A' Block, 5th Floor, BMTC Building, KH Road, Shanthinagar, Bengaluru – 560 027
Phone: 080-22278813/14/15/16; Website: www.ksmc.karnataka.gov.in; CIN: U85110KA1966sgc001620; GST No. 29AACCM2873L1Z0

ಸಂಖ್ಯೆ.ಕೆಎಸ್ಎಂಸಿಎಲ್/ಪಿಇಆರ್/121/ಗ್ರೂ.-ಎ.ನೇ.ನೇ/2022-23/1555 ದಿನಾಂಕ :24.08.2022

## ನೇಮಕಾತಿ ಅಧಿಸೂಚನೆಯ ವಿವರ

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್ (ಕೆಎಸ್ಎಂಸಿಎಲ್) ಕಂಪನಿಯು ಕರ್ನಾಟಕದಲ್ಲಿ ಗಣಿಗಾರಿಕೆಯ ಒಂದು ಪ್ರಧಾನ ಸಂಸ್ಥೆಯಾಗಿದ್ದು, ತನ್ನ ಗಣಿಗಾರಿಕಾ ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸುವ ಮಹತ್ವಾಕಾಂಕ್ಷೆಯ ಯೋಜನೆಗಳನ್ನು ಹೊಂದಿರುತ್ತದೆ. ಪ್ರಸ್ತುತ ಕಂಪನಿಯು ಗ್ರೂಪ್-ಎ ವೇತನ ಶ್ರೇಣಿ ರೂ. 52,650-1250-53900-1450-62600-1650-72500-1900-83900-2200-97,100/- + ರಾಜ್ಯ ಸರ್ಕಾರದ ತುಟ್ಟಿ ಭತ್ಯೆ + ಇತರ ಸವಲತ್ತುಗಳಲ್ಲಿ ವಿವಿಧ ಕ್ಷೇತ್ರದ ಈ ಕೆಳಗಿನ ವ್ಯವಸ್ಥಾಪಕರ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿಮಾಡಲು ಅಗತ್ಯ ವಿದ್ಯಾರ್ಹತೆ ಮತ್ತು ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿರುತ್ತದೆ.

| ಕ್ರ ಸಂ. | ಹುದ್ದೆಯ ಪದನಾಮ | ಉಳಿಕೆ ಮೂಲ ವೃಂದದ ಹುದ್ದೆಗಳು | ಸ್ಥಳೀಯ ವೃಂದದ (ಹೈ-ಕ) ಹುದ್ದೆಗಳು | ಒಟ್ಟು ಹುದ್ದೆಗಳು |
|---|---|---|---|---|
| 1 | ವ್ಯವಸ್ಥಾಪಕ (ಉತ್ಪಾದನೆ) | 3 | - | 03 |
| 2 | ವ್ಯವಸ್ಥಾಪಕ (ಎಂಐಎಸ್) | 01 | - | 01 |
| 3 | ವ್ಯವಸ್ಥಾಪಕ (ಲೇಬರ್ ವೆಲ್ಫೇರ್ ) | - | 01 | 01 |
| 4 | ವ್ಯವಸ್ಥಾಪಕ (ಮಾರ್ಕೆಟಿಂಗ್) | 01 | - | 01 |
| 5 | ವ್ಯವಸ್ಥಾಪಕ (ಮೆಕ್ಯಾನಿಕಲ್ ) | 01 | - | 01 |
| | Total | 06 | 01 | 07 |

ಇಚ್ಛೆಯುಳ್ಳ ಅರ್ಹ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಕೆಎಸ್ಎಂಸಿಎಲ್ ಸಂಸ್ಥೆಯ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

**1.ಅಗತ್ಯ ಕನಿಷ್ಠ ವಿದ್ಯಾರ್ಹತೆ :-** ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಅಭ್ಯರ್ಥಿಯು ಅನುಸೂಚಿಯಲ್ಲಿ ವಿವರಿಸಿರುವಂತೆ, ಸಂಬಂಧಿಸಿದ ಹುದ್ದೆಗೆ ಅಗತ್ಯವಿರುವ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು. ಇದರೊಂದಿಗೆ ನಿರ್ದಿಷ್ಟಪಡಿಸಿರುವ ಹುದ್ದೆಗಳಿಗೆ ಅವಶ್ಯಕವಾಗಿರುವ ಶಾಸನಬದ್ಧ ಪ್ರಮಾಣ ಪತ್ರ ಹೊಂದಿರತಕ್ಕದ್ದು.

.

**2. ಅನುಭವ**:- ಕಂಪನಿಯ ವೃಂದ ಮತ್ತು ನೇಮಕಾತಿ ನಿಯಮಗಳಂತೆ, ಪ್ರತಿ ಹುದ್ದೆಗಳಿಗೆ ಅವಶ್ಯಕವಾಗಿರುವ ಕನಿಷ್ಠ ಅನುಭವವನ್ನು ಅನುಸೂಚಿಯಲ್ಲಿ ತೋರಿಸಿರುವಂತೆ, ಅಭ್ಯರ್ಥಿಯು ಹೊಂದಿರತಕ್ಕದ್ದು. ವಿವರಗಳನ್ನು ಅರ್ಜಿಯಲ್ಲಿ ಭರ್ತಿ ಮಾಡಿ ಪ್ರಮಾಣ ಪತ್ರಗಳ ಪ್ರತಿಯನ್ನು ಲಗತ್ತಿಸತಕ್ಕದ್ದು.

**3. ವಯಸ್ಸು**:- ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಅಭ್ಯರ್ಥಿಗಳು 18 ವರ್ಷ ತುಂಬಿದವರಾಗಿರಬೇಕು ಮತ್ತು 40/45 ವರ್ಷ (ಅನುಸೂಚಿಯಲ್ಲಿ ವಿವರಿಸಿರುವಂತೆ) ವಯಸ್ಸು ಮೀರಿದವರಾಗಿರಬಾರದು.
ವಯಸ್ಸಿನ ಪುರಾವೆಗಾಗಿ ಸೆಕೆಂಡರಿ ಸ್ಕೂಲ್ ಲಿವಿಂಗ್ ಸರ್ಟಿಫಿಕೇಟ್ ಅಥವಾ ಅದಕ್ಕೆ ತತ್ಸಮಾನವೆಂದು ಘೋಷಿಸಿರುವ ಇತರ ಪರೀಕ್ಷೆಯ ಸರ್ಟಿಫಿಕೇಟ್ ಮಾತ್ರ ಪರಿಗಣಿಸಲಾಗುವುದು.

**4. ಅರ್ಜಿ ಶುಲ್ಕ ( ಮರುಪಾವತಿಸಲಾಗುವುದಿಲ್ಲ):-**

ಸದರಿ ಹುದ್ದೆಗಳಿಗೆ ನಿಗದಿಪಡಿಸಿರುವ ಅರ್ಜಿ ಶುಲ್ಕವು ಈ ಕೆಳಗಿನಂತ್ತಿದೆ:

a) ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ರೂ. 500/- + ಜಿ.ಎಸ್.ಟಿ. ರೂ. 90/-(ಶೇ,18 )= ಒಟ್ಟು ರೂ. 590/- (ರೂಪಾಯಿ ಐದು ನೂರ ತೊಂಭತ್ತು ಮಾತ್ರ)

b) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಠ ಪಂಗಡದ ಅಭ್ಯರ್ಥಿಗಳಿಗೆ ರೂ.250/- + ಜಿ.ಎಸ್.ಟಿ. ರೂ.45/- (ಶೇ.18) ರಂತೆ=ಒಟ್ಟು ರೂ. 295/- (ರೂಪಾಯಿ ಎರಡು ನೂರ ತೊಂಭತ್ತೈದು ಮಾತ್ರ)

**c)** ಅರ್ಜಿ ಶುಲ್ಕ ರೂ. 590/295 (ಜಿ.ಎಸ್.ಟಿ. ಸೇರಿ) ಮೊತ್ತದ ಡಿಮ್ಯಾಂಡ್ ಡ್ರಾಫ್ಟ ಅನ್ನು "KSMCL, Bengaluru" ಹೆಸರಿನಲ್ಲಿ ಬೆಂಗಳೂರಿನಲ್ಲಿ ಪಾವತಿಸುವಂತೆ ಪಡೆಯತಕ್ಕದ್ದು. ಅರ್ಜಿ ಶುಲ್ಕ ಪಾವತಿಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.

**5. ಅರ್ಜಿ ಸಲ್ಲಿಕೆ:-**

ಅರ್ಜಿ ನಮೂನೆಯನ್ನು ಸಂಸ್ಥೆಯ ವೆಬ್‌ಸೈಟ್ www.ksmc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು ಭರ್ತಿಮಾಡಿ, ಅದರೊಂದಿಗೆ ಅಭ್ಯರ್ಥಿಯ ವಿವರ (RESUME), ಶೈಕ್ಷಣಿಕ ವಿದ್ಯಾಭ್ಯಾಸದ ಪ್ರಮಾಣ ಪತ್ರಗಳು, ಶಾಸನಾತ್ಮಕ ಪ್ರಮಾಣ ಪತ್ರಗಳು, ಅನುಭವ, ಜಾತಿ, 371(ಜೆ) ಪ್ರಮಾಣ ಪತ್ರ (ಸ್ಥಳೀಯ ವೃಂದದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ಮಾತ್ರ) ಮುಂತಾದವುಗಳ ದೃಢೀಕರಣ ಪ್ರತಿಗಳನ್ನು ಲಗತ್ತಿಸಿ, ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದೊಳಗೆ ತಲುಪುವಂತೆ ಸಲ್ಲಿಸಬೇಕು.

**6. ಆಯ್ಕೆ:-**

ಮೇಲ್ಕಾಣಿಸಿದ ವ್ಯವಸ್ಥಾಪಕರುಗಳ ಹುದ್ದೆಯ ನೇಮಕಾತಿಯ ಆಯ್ಕೆಯನ್ನು ಕಟ್ಟುನಿಟ್ಟಾಗಿ ಅರ್ಹತೆಯ ಆಧಾರದ ಮೇಲೆ ಈ ಕೆಳಗಿನಂತೆ ನಡೆಸಲಾಗುವುದು:-
ಹುದ್ದೆಯ ಆಯ್ಕೆಗಾಗಿ ಶಾರ್ಟ್‌ಲಿಸ್ಟ ಮಾಡಲಾದ ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನ ನಡೆಸಲಾಗುವುದು. ಶಾರ್ಟಲಿಸ್ಟ ಮಾಡಲು ಅಭ್ಯರ್ಥಿಗಳ ಅರ್ಹತಾ ಪರೀಕ್ಷೆಯಲ್ಲಿ ಅವರುಗಳು ಪಡೆದ ಅಂಕಗಳ ಶೇಕಡವಾರು, ಶಾಸನಾತ್ಮಕ ಪ್ರಮಾಣ ಪತ್ರ ಮತ್ತು ನಿಗದಿ ಪಡಿಸಿದ ಅನುಭವ ಇವುಗಳನ್ನು ಪರಿಗಣಿಸಲಾಗುವುದು. ಶಾರ್ಟ್‌ಲಿಸ್ಟ ಮಾಡಲಾದ

ಅರ್ಹ ಅಭ್ಯರ್ಥಿಗಳನ್ನು ಅವರೋಹಣ ಕ್ರಮದಲ್ಲಿ 1:7 ಮತ್ತು 1:5 ಅನುಪಾತದಲ್ಲಿ (ಅನುಕ್ರಮವಾಗಿ ಒಂದು ಹುದ್ದೆ ಮತ್ತು ಒಂದಕ್ಕಿಂತ ಹೆಚ್ಚಿನ ಹುದ್ದೆಗಳು ಇರುವುದಕ್ಕೆ) ವೈಯಕ್ತಿಕ ಸಂದರ್ಶನಕ್ಕೆ ಕರೆಯಲಾಗುವುದು. ಶಾರ್ಟ್‌ಲಿಸ್ಟ್ ಮಾಡುವಲ್ಲಿ ಮಾನದಂಡವಾಗಿ ನಿಗದಿಪಡಿಸಲಾದ ಒಟ್ಟು ಅಂಕಗಳು 70 ಮತ್ತು ಸಂದರ್ಶನಕ್ಕೆ 30 ಅಂಕಗಳಾಗಿರುತ್ತವೆ.

**7. <u>ಸಾಮಾನ್ಯ ಸೂಚನೆಗಳು</u>:-**

1. ಅಭ್ಯರ್ಥಿಗಳು ಭಾರತೀಯ ನಾಗರೀಕರಾಗಿರಬೇಕು.

2. ನೈತಿಕ ಅಧಪತನವನ್ನೊಳಗೊಂಡ ಅಪರಾಧಕ್ಕಾಗಿ ಶಿಕ್ಷೆಗೊಳಗಾದ ಅಥವಾ ಕೇಂದ್ರ ಅಥವಾ ಯಾವುದೇ ರಾಜ್ಯ ಪಬ್ಲಿಕ್ ಸರ್ವಿಸ್ ಕಮಿಷನ್‌ನಿಂದ ಪರೀಕ್ಷೆ ಅಥವಾ ಆಯ್ಕೆಗಾಗಿ ಹಾಜರಾಗಲು ತಾತ್ಕಾಲಿಕವಾಗಿ ಡಿಬಾರ್ ಅಥವಾ ಅನರ್ಹತೆಗೊಳಿಸಲಾದ ಯಾವುದೇ ವ್ಯಕ್ತಿಯನ್ನು ಸಾಮಾನ್ಯವಾಗಿ ಆಯ್ಕೆಗೆ ಪರಿಗಣಿಸಲಾಗುವುದಿಲ್ಲ. ಕಂಪನಿಯು ಎಲ್ಲಾ ಸಂದರ್ಭಗಳನ್ನು ಸಮೀಕ್ಷೆ ಮಾಡಿದ ನಂತರ ಅಂತಹ ಅಭ್ಯರ್ಥಿಗಳು ನೇಮಕಾತಿಗೆ ಯೋಗ್ಯರಾದಲ್ಲಿ ಪರಿಗಣಿಸಬಹುದಾಗಿರುತ್ತದೆ.

3. ತಪ್ಪು ಮಾಹಿತಿ ಒಳಗೊಂಡಿರುವ ಅರ್ಜಿಯನ್ನು ತಿರಸ್ಕರಿಸಲಾಗುವುದು. ಅರ್ಜಿಯಲ್ಲಿ ತಪ್ಪು ಮಾಹಿತಿ ನೀಡಿ ನೇಮಕಾತಿ ಹೊಂದಿದ ಅಭ್ಯರ್ಥಿಯ ನೇಮಕಾತಿಯನ್ನು ರದ್ದುಪಡಿಸಲಾಗುವುದು ಮತ್ತು ಅವರು ಕಾನೂನಿನ ಪ್ರಕಾರ ಸ್ವತ: ಕ್ರಿಮಿನಲ್ ಪ್ರಕ್ರಿಯೆಗಳಿಗೆ ಒಳಪಡುತ್ತಾರೆ.

4. ಎಲ್ಲಾ ವ್ಯವಹಾರಗಳನ್ನು ಅಭ್ಯರ್ಥಿಯು ಅರ್ಜಿಯಲ್ಲಿ ಒದಗಿಸಿದ ವಿವರಗಳ ಪ್ರಕಾರ ನಡೆಸಲಾಗುವುದು. ನಂತರದಲ್ಲಿ ವಿಳಾಸ, ಇ-ಮೇಲ್ ಮತ್ತು ಮೊಬೈಲ್ ಸಂಖ್ಯೆ ಬದಲಾವಣೆಯ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.

5. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿ ಹುದ್ದೆಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕಗಳನ್ನು ಉಂಟುಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತವಾಗಿರಬೇಕು.

6. ಜಾತಿ ಮೀಸಲಾತಿ ಕೋರುವ ಅಭ್ಯರ್ಥಿಯು ಸರ್ಕಾರದ ಆದೇಶ / ಮಾರ್ಗ ಸೂಚಿಯಂತೆ ನಿಗದಿಪಡಿಸಿದ ನಮೂನೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.

7. ವ್ಯವಸ್ಥಾಪಕ (ಲೇಬರ್ ವೆಲ್‌ಫೇರ್) ಹುದ್ದೆಯು ಹೈದ್ರಾಬಾದ್ ಕರ್ನಾಟಕ ಸ್ಥಳೀಯ ವೃಂದದ ಹುದ್ದೆಯಾಗಿರುತ್ತದೆ. ದಿನಾಂಕ:06.11.2013ರ ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿ.ಪಿ.ಎ.ಆರ್. 06/ ಪಿಎಲ್‌ಎಕ್ಸ್-2012ರ ಕ್ರಮ ಸಂಖ್ಯೆ:06ರಂತೆ ಮತ್ತು ಈ ನಿಟ್ಟಿನಲ್ಲಿ ಕಾಲಕಾಲಕ್ಕೆ ಆದ ತಿದ್ದುಪಡಿಗಳಿಗನುಸಾರ ಅಭ್ಯರ್ಥಿಯನ್ನು ಪ್ರಾದೇಶಿಕ ಸ್ಥಳೀಯ ವ್ಯಕ್ತಿಯೆಂದು ಪರಿಗಣಿಸಲಾಗುವುದು. (ಕರ್ನಾಟಕ ಪಬ್ಲಿಕ್ ಎಂಪ್ಲಾಯ್‌ಮೆಂಟ್-ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ ಆದೇಶ 2013ರಂತೆ). ಅಭ್ಯರ್ಥಿಗಳು ಸರ್ಕಾರದ ಅಧಿಸೂಚನೆ 1-11 DPAR 43 HKC 2013¸ dated:29.01.2014 ರಂತೆ ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

8. ಮೂಲ ದಾಖಲೆಗಳು/ಪ್ರಶಂಸ ಪತ್ರಗಳು/ಪ್ರಮಾಣ ಪತ್ರಗಳು ಮುಂತಾದವು ಗಳನ್ನು ಪರಿಶೀಲನೆಗೆ ಸೂಚಿಸಿದಾಗ ಮಾತ್ರ ಹಾಜರು ಪಡಿಸುವುದು. ಸಂಬಂಧಿತ ದಾಖಲೆಗಳನ್ನು ಹಾಜರುಪಡಿಸದ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾ ಗುವುದಿಲ್ಲ.

9. ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ನಿರಾಪೇಕ್ಷಣೆ ಪ್ರಮಾಣ ಪತ್ರವನ್ನು ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸತಕ್ಕದ್ದು. ಇಲ್ಲವಾದಲ್ಲಿ ಅಂತಹವರ ಅರ್ಜಿಯನ್ನು ತಿರಸ್ಕರಿಸಲಾ ಗುವುದು.

10. ಅವಶ್ಯವಿದ್ದಲ್ಲಿ , ಕಂಪನಿಯು ಯಾವುದೇ ಅಧಿಸೂಚನೆ ಹೊರಡಿಸದೇ, ಯಾವುದೇ ಹಂತದಲ್ಲಿಈ ನೇಮಕಾತಿ ಅಧಿಸೂಚನೆಯನ್ನು ರದ್ದುಪಡಿಸುವ, ತಿದ್ದುಪಡಿ ಮಾಡುವ, ಬದಲಾಯಿಸುವ ಹಕ್ಕನ್ನು ಹೊಂದಿರುತ್ತದೆ.

11. ನೇಮಕಾತಿ ಪ್ರಕ್ರಿಯೆ ಬಗ್ಗೆ ಅಭ್ಯರ್ಥಿಗಳು ಯಾವುದೇ ವಿಚಾರಣೆ/ವ್ಯವಹಾರ ಮಾಡುವಂತಿಲ್ಲ.

12. ಅಭ್ಯರ್ಥಿಗಳು ಕನ್ನಡ ಓದುವ, ಬರೆಯುವ ಮತ್ತು ಮಾತನಾಡುವ ಜ್ಞಾನ ಹೊಂದಿರಬೇಕು.

13. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಕಂಪನಿಯಿಂದ ಯಾವುದೇ ಪ್ರವಾಸ ಭತ್ಯೆ/ದಿನ ಭತ್ಯೆ ಪಾವತಿಸಲಾಗುವುದಿಲ್ಲ.

14. ಅಭ್ಯರ್ಥಿಗಳ ಅರ್ಹತೆ ಬಗ್ಗೆ ಸಂಸ್ಥೆಯ ನಿರ್ಣಯವು ಅಂತಿಮ ಮತ್ತು ಬದ್ಧ ಪಡಿಸುವುದಾಗಿರುತ್ತದೆ.

15. ಅಭ್ಯರ್ಥಿಯು ಯಾವುದೇ ರೀತಿ ಪ್ರಭಾವ ಬೀರುವುದು ಅವರನ್ನು ನೇಮಕಾತಿಗೆ ಅನರ್ಹತೆಗೊಳಿಸುತ್ತದೆ.

16. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದಂದು ಅರ್ಹತೆಗಾಗಿ ನಿಗದಿ ಪಡಿಸಿದ ಎಲ್ಲಾ ಮಾನದಂಡಗಳನ್ನು ಪೂರೈಸಬೇಕು.

17. ಆಯ್ಕೆಗೊಂಡ ಅಭ್ಯರ್ಥಿಗಳು ನೇಮಕಾತಿಗಾಗಿ ತಮ್ಮ ಫಿಟ್ನೆಸ್ ಇರುವ ಬಗ್ಗೆ ಪ್ರಮಾಣ ಪತ್ರ ಪಡೆಯಲು ವೈದ್ಯಕೀಯ ಮಂಡಳಿಯ ಮುಂದೆ ಹಾಜರಾಗಬೇಕು. ಅಭ್ಯರ್ಥಿಗಳು ನೇಮಕಾತಿ ಫಿಟ್ನೆಸ್ ಇರುವ / ಇಲ್ಲದಿರುವ ಬಗ್ಗೆ ವೈದ್ಯಕೀಯ ಪ್ರಾಧಿಕಾರದ ಅಭಿಪ್ರಾಯವು ಅಭ್ಯರ್ಥಿಯ ಮೇಲೆ ಬದ್ಧತೆಯಾಗಿರುತ್ತದೆ.

8. ಇಚ್ಛೆವುಳ್ಳ ಅರ್ಹ ಅಭ್ಯರ್ಥಿಗಳಿಗೆ ಅರ್ಜಿ ನಮೂನೆಯನ್ನು ಕೆಎಸ್ಎಂಸಿಎಲ್ ವೆಬ್ ಸೈಟ್ ನಿಂದ ಡೌನ್ ಲೋಡ್ ಮಾಡಿಕೊಳ್ಳಲು ಸೂಚಿಸಿದೆ. ಅರ್ಜಿಯನ್ನು ಭರ್ತಿ ಮಾಡಿ, ಸಹಿ ಮಾಡಿ ಅದರೊಂದಿಗೆ ತಮ್ಮ ವೈಯಕ್ತಿಕ ಮಾಹಿತಿ (RESUME), ಶೈಕ್ಷಣಿಕ ವಿದ್ಯಾರ್ಹತೆ, ಶಾಸನಾತ್ಮಕ ಪ್ರಮಾಣ ಪತ್ರ, ವಯಸ್ಸು, ಅನುಭವ, ಜಾತಿ, 371(ಜೆ) ಮುಂತಾದ ದೃಢೀಕರಿಸಿದ ಪ್ರಮಾಣ ಪತ್ರಗಳ ಪ್ರತಿಗಳೊಂದಿಗೆ ಲಕೋಟೆಯ ಮೇಲೆ "**ವ್ಯವಸ್ಥಾಪಕರು-ಉತ್ಪಾದನೆ/ಎಂಐಎಸ್/ಲೇಬರ್ ವೆಲ್ಫೇರ್/ಮಾರ್ಕೆಟಿಂಗ್ /ಮೆಕ್ಯಾನಿಕಲ್**

(ಸಂಬಂಧಿಸಿ ರುವುದನ್ನು ಮಾತ್ರ ನಮೂದಿಸುವುದು.) ಹುದ್ದೆಗಾಗಿ ಅರ್ಜಿ ಎಂದು ದಾಖಲಿಸಿ ನಿಗಧಿತ ಮೊತ್ತದ ಡಿ.ಡಿ.ಯೊಂದಿಗೆ **ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಜಾಗೃತ),** ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್, ಟಿಟಿಎಂಸಿ ' ಎ ' ಬ್ಲಾಕ್, ಐದನೇ ಮಹಡಿ, ಬಿಎಂಟಿಸಿ ಕಟ್ಟಡ, ಕೆ.ಹೆಚ್. ರಸ್ತೆ, ಶಾಂತಿ ನಗರ, ಬೆಂಗಳೂರು-560 027 ಇವರಿಗೆ ಸ್ಪೀಡ್ ಪೋಸ್ಟ್/ಕೋರಿಯರ್ ಮೂಲಕ **ದಿನಾಂಕ:10.10.2022ರೊಳಗಾಗಿ** ತಲುಪುವಂತೆ ಸಲ್ಲಿಸತಕ್ಕದ್ದು. ಪೋಸ್ಟಲ್ / ಕೋರಿಯರ್ ವಿಳಂಬ ಅಥವಾ ಇನ್ನಾವುದೇ ಕಾರಣಗಳಿಂದ ನಿಗದಿತ ದಿನಾಂಕದ ನಂತರ ತಲುಪಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಅವುಗಳನ್ನು ತಿರಸ್ಕರಿಸಲಾಗುವುದು.

ಸಹಿ/-

ವ್ಯವಸ್ಥಾಪಕ ನಿರ್ದೇಶಕರು